# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

## ವಿಜ್ಞಾನಭವನ, ನಂ.24/2, 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು

## ವಾರ್ಷಿಕ ವರದಿ 2014–15

| ಕ್ರಮ ಸಂಖ್ಯೆ | ಕಾರ್ಯಕ್ರಮದ ಹೆಸರು | ಕಾರ್ಯಕ್ರಮದ ಧ್ಯೇಯೋದ್ದೇಶಗಳು | ಕಾರ್ಯಕ್ರಮ ವಿವರ | ಫಲಾನುಭವಿಗಳು |
|---|---|---|---|---|
| 1. | **29ನೇ ಅಖಿಲ ಕರ್ನಾಟಕ ಉದಯೋನ್ಮುಖ ವಿಜ್ಞಾನ ಲೇಖಕರ ಶಿಬಿರ** | ಉದಯೋನ್ಮುಖ ಲೇಖಕರಿಗೆ ವಿಜ್ಞಾನ ವಿಷಯ ಕುರಿತು ಲೇಖನಗಳನ್ನು ಬರೆಯಲು ತರಬೇತಿ ನೀಡುವುದು. | ಐದು ದಿನಗಳ ವಿಜ್ಞಾನ ಲೇಖಕರ ಶಿಬಿರವನ್ನು ದಿನಾಂಕ 26–30, ಜುಲೈ 2014 ಅವಧಿಯಲ್ಲಿ ಕಲ್ಬುರ್ಗಿ ನಗರದ ಪಿ.ಡಿ.ಎ. ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಆಯೋಜಿಸಲಾಗಿತ್ತು. | ರಾಜ್ಯದ ವಿವಿಧ ಭಾಗಗಳಿಂದ ಆಯ್ಕೆಗೊಂಡ 70 ಉದಯೋನ್ಮುಖ ಲೇಖಕರು ಹಾಗೂ ಪತ್ರಿಕೋದ್ಯಮ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು. |
| 2. | **ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ವೈಜ್ಞಾನಿಕ ಉಪಕರಣಗಳ ಪ್ರಾತ್ಯಕ್ಷಿಕೆ ಹಾಗು ತರಬೇತಿ ಕಾರ್ಯಾಗಾರ.** | ಡಾ. ನಂಜುಂಡಪ್ಪ ವರದಿಯನ್ನು ಆಧರಿಸಿ ರಾಜ್ಯದ ಹಿಂದುಳಿದ ಜಿಲ್ಲೆಗಳ ಆಯ್ದ ಪದವಿಪೂರ್ವ ಕಾಲೇಜುಗಳಿಗೆ ವೈಜ್ಞಾನಿಕ ಉಪಕರಣಗಳನ್ನು ನೀಡುವುದರೊಂದಿಗೆ ಸಮರ್ಪಕ ಬಳಕೆಗಾಗಿ ಅಗತ್ಯ ತರಬೇತಿಯನ್ನು ಸಂಬಂಧಪಟ್ಟ ಉಪನ್ಯಾಸಕರಿಗೆ ನೀಡುವುದು. | ವೈಜ್ಞಾನಿಕ ಉಪಕರಣಗಳ ಪ್ರಾತ್ಯಕ್ಷಿಕೆ ಹಾಗು ತರಬೇತಿ ಕಾರ್ಯಾಗಾರವನ್ನು ದಿನಾಂಕ 7.9.2014ರಂದು ಧಾರವಾಡ ನಗರದ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿರುವ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. | ಕಲ್ಬುರ್ಗಿ ಮತ್ತು ಬೆಳಗಾವಿ ಜಿಲ್ಲೆಯ ಪದವಿಪೂರ್ವ ಕಾಲೇಜುಗಳ 100 ಉಪನ್ಯಾಸಕರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. |
| 3. | **ಜನ ವಿಜ್ಞಾನ ಚಳುವಳಿಯ ಅಂಗವಾಗಿ ವೈಜ್ಞಾನಿಕ ಮನೋಭಾವ ಜಾಗೃತಿ ಕಮ್ಮಟ** | ಜನಸಾಮಾನ್ಯರಲ್ಲಿ ವೈಜ್ಞಾನಿಕ ಮನೋಭಾವಕ್ಕೆ ಪ್ರೇರಣೆ ನೀಡುವ ಮತ್ತು ವಿಜ್ಞಾನದ ಮಾನವೀಯ ಮೌಲ್ಯವನ್ನು ಜನಸಾಮಾನ್ಯರಿಗೆ ಪರಿಚಯಿಸುವುದು. | ದಕ್ಷಿಣ ಕರ್ನಾಟಕ ವಿಭಾಗದ ಎರಡು ದಿನಗಳ ವೈಜ್ಞಾನಿಕ ಮನೋಭಾವ ಜಾಗೃತಿ ಕಮ್ಮಟವನ್ನು ದಿನಾಂಕ 29–30 ನವೆಂಬರ್ 2014ರಂದು ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ ಸಂಘಟಿಸಲಾಗಿತ್ತು.<br><br>ಜನವಾದಿ ಮಹಿಳಾ ಸಂಘಟನೆಯ ಶ್ರೀಮತಿ ಕೆ.ಎಸ್. ವಿಮಲಾ, ಕರ್ನಾಟಕ ವಿಚಾರವಾದಿ ಸಂಘದ ಶ್ರೀ ಎ.ಎಸ್. ನಟರಾಜ್, ವಿಚಾರವಾದಿ ಪ್ರೊ॥ ನರೇಂದ್ರನಾಯಕ್ ಹಾಗೂ ವೈದ್ಯರಾದ ಡಾ॥ ಪ್ರಕಾಶ್ ಸಿ. ರಾವ್ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. | ಶ್ರವಣಬೆಳಗೊಳದ ಕಮ್ಮಟದಲ್ಲಿ ಒಟ್ಟು 70 ಜನ ಶಿಕ್ಷಕರು, ಮಹಿಳೆಯರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. |

| | | | | |
|---|---|---|---|---|
| | | | ಉತ್ತರ ಕರ್ನಾಟಕ ವಿಭಾಗದ ಎರಡು ದಿನಗಳ ವೈಜ್ಞಾನಿಕ ಮನೋಜಾಗೃತಿ ಕಮ್ಮಟವನ್ನು ಬೀದರ ಜಿಲ್ಲೆಯ ಬಸವ ಕಲ್ಯಾಣದಲ್ಲಿ ದಿನಾಂಕ 01–02, ಮಾರ್ಚ್ 2015 ರಂದು ಆಯೋಜಿಸಲಾಗಿತ್ತು. | |
| 4. | **ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಸಂಸ್ಥಾಪನಾ ದಿನಾಚರಣೆ** | ವಿಜ್ಞಾನ ಪರಿಷತ್ತಿನ ಸ್ಥಾಪನೆಯಲ್ಲಿ ಮಹತ್ವದ ಪಾತ್ರ ವಹಿಸಿದ ಸಂಸ್ಥಾಪಕ ಸದಸ್ಯರ ಕೊಡುಗೆಯನ್ನು ಸ್ಮರಿಸುವುದು ಹಾಗು ವೈವಿಧ್ಯಮಯ ವೈಜ್ಞಾನಿಕ ಚಟುವಟಿಕೆಗಳನ್ನು ಆಯೋಜಿಸುವುದು. | ದಿನಾಂಕ 11.11.2014 ರಂದು ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ವೈವಿಧ್ಯಮಯ ವೈಜ್ಞಾನಿಕ ಚಟುವಟಿಕೆಗಳೊಂದಿಗೆ ಕರಾವಿಪ ಸಂಸ್ಥಾಪನಾ ದಿನಾಚರಣೆಯನ್ನು ಆಚರಿಸಲಾಯಿತು. | ಕರಾವಿಪ ಸದಸ್ಯರು ಹಾಗು ಸಾರ್ವಜನಿಕರು. |
| 5. | **22ನೇ ರಾಜ್ಯಮಟ್ಟದ ಮಕ್ಕಳ ವಿಜ್ಞಾನ ಸಮಾವೇಶ –2014** | 10–17 ವಯೋಮಾನದ ಮಕ್ಕಳಲ್ಲಿ ಸೃಜನಾತ್ಮಕ ವಿಜ್ಞಾನ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರೇರೇಪಣೆ ನೀಡುವುದು. ಸ್ಥಳೀಯ ಸಮಸ್ಯೆಯೊಂದನ್ನು ಆಯ್ದು ವೈಜ್ಞಾನಿಕವಾಗಿ ಅಧ್ಯಯನ ಕೈಗೊಳ್ಳುವುದರೊಂದಿಗೆ ವಿಶ್ಲೇಷಣೆ, ಸಂಶೋಧನಾತ್ಮಕ ಪರಿಹಾರಗಳೊಂದಿಗೆ ಸಮಾಜಕ್ಕೆ ಕೊಡುಗೆ ನೀಡುವಲ್ಲಿ ಮಹತ್ವದ ಪಾತ್ರ ವಹಿಸುವುದು. | 22ನೇ ರಾಜ್ಯಮಟ್ಟದ ಮಕ್ಕಳ ವಿಜ್ಞಾನ ಸಮಾವೇಶವನ್ನು ದಿನಾಂಕ 10–12, ಡಿಸೆಂಬರ್ 2014ರಂದು ಬೀದರ ನಗರದ ಅಕ್ಕಮಹಾದೇವಿ ಮಹಿಳಾ ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿತ್ತು. | ರಾಜ್ಯದ ವಿವಿಧ ಜಿಲ್ಲೆಗಳಿಂದ ಆಯ್ದ 650–700 ವಿದ್ಯಾರ್ಥಿ/ವಿದ್ಯಾರ್ಥಿನಿಯರು ಹಾಗು ಮಾರ್ಗದರ್ಶಿ ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. |
| 6. | **22ನೇ ರಾಷ್ಟ್ರಮಟ್ಟದ ಮಕ್ಕಳ ವಿಜ್ಞಾನ ಸಮಾವೇಶ – 2014** | 10–17 ವಯೋಮಾನದ ಮಕ್ಕಳಲ್ಲಿ ಸೃಜನಾತ್ಮಕ ವಿಜ್ಞಾನ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರೇರೇಪಣೆ ನೀಡುವುದು. ಸ್ಥಳೀಯ ಸಮಸ್ಯೆಯೊಂದನ್ನು ಆಯ್ದು ವೈಜ್ಞಾನಿಕವಾಗಿ ಅಧ್ಯಯನ ಕೈಗೊಳ್ಳುವುದರೊಂದಿಗೆ ವಿಶ್ಲೇಷಣೆ, ಸಂಶೋಧನಾತ್ಮಕ ಪರಿಹಾರಗಳೊಂದಿಗೆ ಸಮಾಜಕ್ಕೆ ಕೊಡುಗೆ ನೀಡುವಲ್ಲಿ ಮಹತ್ವದ ಪಾತ್ರ ವಹಿಸುವುದು. | 22ನೇ ರಾಷ್ಟ್ರಮಟ್ಟದ ಮಕ್ಕಳ ವಿಜ್ಞಾನ ಸಮಾವೇಶವನ್ನು ದಿನಾಂಕ 27–31 ಡಿಸೆಂಬರ್ 2014ರಂದು ಬೆಂಗಳೂರಿನ ಬಿ.ಜಿ.ಎಸ್. ಸಂಸ್ಥೆಯ ಎಸ್.ಜೆ.ಬಿ.ಐ.ಟಿ. ಆವರಣದಲ್ಲಿ ಆಯೋಜಿಸಲಾಗಿತ್ತು. | ದೇಶದ ವಿವಿಧ ರಾಜ್ಯಗಳಿಂದ ಆಯ್ದ 2000 ವಿದ್ಯಾರ್ಥಿ/ವಿದ್ಯಾರ್ಥಿನಿಯರು, ಪಾಲಕರು ಹಾಗು ಮಾರ್ಗದರ್ಶಿ ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. |
| 7. | **'ನಿಮ್ಮ ಬಳಿಗೆ ವಿಜ್ಞಾನ' ಯೋಜನೆ** | ಜನರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ, ಸ್ಥಳೀಯ ಭೌತಿಕ ಮತ್ತು ಸಾಮಾಜಿಕ ಪರಿಸರವನ್ನು ಅರ್ಥಮಾಡಿಕೊಳ್ಳಲು ಹಾಗೂ ಪರಿಣಾಮಕಾರಿ ಚಳುವಳಿಯಾಗಿ ಬೆಳೆಸಲು ಕರಾವಿಪ ದಾನಿ ಸಂಘಸಂಸ್ಥೆಗಳು ಹಾಗೂ ಘಟಕಗಳನ್ನು ಕೇಂದ್ರೀಕರಿಸಿ ರೂಪಿಸಿರುವಂಥ ಒಂದು ಯೋಜನೆ. | ಜಿಲ್ಲಾಮಟ್ಟದ ಕಾರ್ಯಕ್ರಮ :<br>ಪೌಷ್ಠಿಕತ, ಮೂಢನಂಬಿಕೆಗಳ ನಿವಾರಣೆ, ಪವಾಡ ಬಯಲು ಪ್ರಾತ್ಯಕ್ಷಿಕೆ, ಉಪನ್ಯಾಸ ಗಳನ್ನೊಳಗೊಂಡ ಜಿಲ್ಲಾ ಮಟ್ಟದ ಕಾರ್ಯಕ್ರಮಗಳನ್ನು 282 ಘಟಕಗಳು ಜಿಲ್ಲಾ ಸಮಿತಿಗಳು ಹಾಗು ದಾನಿ ಸಂಘ ಸಂಸ್ಥೆಗಳ ಅಡಿಯಲ್ಲಿ ಕೈಗೊಳ್ಳಲಾಗುತ್ತಿದೆ. | 1500 ಮಕ್ಕಳು, ಪಾಲಕರು ಹಾಗು ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿ ಲಾಭ ಪಡೆಯುತ್ತಿದ್ದಾರೆ. |

| | | | | |
|---|---|---|---|---|
| 8. | **ಸರ್. ಸಿ.ವಿ. ರಾಮನ್ ರಾಜ್ಯಮಟ್ಟದ 'ಥಟ್ ಅಂತ ಹೇಳಿ" ದೂರದರ್ಶನ ವಿಜ್ಞಾನ ಕ್ವಿಜ್ ಕಾರ್ಯಕ್ರಮ.** | ವಿದ್ಯಾರ್ಥಿಗಳು ವಿಜ್ಞಾನದ ಮೂಲಭೂತ ತತ್ವಗಳನ್ನು ಅರಿತುಕೊಳ್ಳುವುದರೊಂದಿಗೆ ಪ್ರಚಲಿತ ವೈಜ್ಞಾನಿಕ ಸಂಶೋಧನೆಗಳ ಕುರಿತು ಅರಿತುಕೊಳ್ಳಲು ಪ್ರೇರೇಪಣೆ ಮತ್ತು ಅವಕಾಶ ನೀಡುವುದು. | ಜಿಲ್ಲಾಮಟ್ಟದ ಕಾರ್ಯಕ್ರಮ :<br>ದಿನಾಂಕ 17.01.2015ರಂದು ರಾಜ್ಯದಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾಮಟ್ಟದ ಕಾರ್ಯಕ್ರಮವನ್ನು ಆಯೋಜಿಲಾಗಿತ್ತು.<br>ರಾಜ್ಯಮಟ್ಟದ ಕಾರ್ಯಕಮ :<br>ರಾಜ್ಯಮಟ್ಟದ ವಿಜ್ಞಾನ ಕ್ವಿಜ್ ಸ್ಪರ್ಧೆಯನ್ನು ಖ್ಯಾತ ವಿಜ್ಞಾನಿ ಸರ್.ಸಿ.ವಿ. ರಾಮನ್ ಇವರ ಸ್ಮರಣೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ – ವಿಜ್ಞಾನ ಮಾಸಾಚರಣೆಯ ಅಂಗವಾಗಿ ಬೆಂಗಳೂರು ದೂರದರ್ಶನ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ 27 ಕಂತುಗಳ ಚಿತ್ರೀಕರಣವನ್ನು ದಿನಾಂಕ 19–23, ಜನವರಿ 2015 ಅವಧಿಯಲ್ಲಿ ಕೈಗೊಳ್ಳಲಾಯಿತು. ಪ್ರಸ್ತುತ ಕಾರ್ಯಕ್ರಮವು ದಿನಾಂಕ 22.01.2015ರಿಂದ 27.02.2015ರ ಅವಧಿಯಲ್ಲಿ ಶನಿವಾರ ಹಾಗು ಭಾನುವಾರಗಳನ್ನು ಹೊರತುಪಡಿಸಿ ಪ್ರತಿ ನಿತ್ಯವೂ ರಾತ್ರಿ 9.30 ಗಂಟೆಗೆ ಪ್ರಸಾರಗೊಳ್ಳುತ್ತಿದೆ. | ಜಿಲ್ಲಾಮಟ್ಟ ಹಾಗು ರಾಜ್ಯಮಟ್ಟ ಸೇರಿದಂತೆ ಒಟ್ಟು 1800 ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿರುತ್ತಾರೆ.<br>ಕನಿಷ್ಠ 25000 ಮಕ್ಕಳು, ಪಾಲಕರು, ಶಿಕ್ಷಕರು ಹಾಗು ಜನಸಾಮಾನ್ಯರು ಪ್ರತಿನಿತ್ಯ ಪ್ರಸಾರವಾಗುವ ಕಾರ್ಯಕ್ರಮವನ್ನು ವೀಕ್ಷಿಸಿ ಲಾಭ ಪಡೆದಿರುತ್ತಾರೆ. |
| 9. | **ಯುವವಿಜ್ಞಾನಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ 2014–15** | 15–18 ವಯೋಮಿತಿಯ ಪ್ರೌಢಶಾಲಾ ಹಾಗೂ ಪದವಿಪೂರ್ವ ಮಟ್ಟದಲ್ಲಿ ಅಧ್ಯಯನ ಕೈಗೊಳ್ಳುತ್ತಿರುವ ಮಕ್ಕಳು ಹಾಗು ಯುವಕರಲ್ಲಿ ಸೃಜನಾತ್ಮಕ ವಿಜ್ಞಾನ ಚಟುವಟಿಕೆಗಳನ್ನು, ಯೋಜನೆಗಳನ್ನು ಕೈಗೊಳ್ಳಲು ಹಾಗು ವೈಜ್ಞಾನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಉತ್ತೇಜನ ನೀಡುವುದು. | ಜಿಲ್ಲಾಮಟ್ಟದ ಕಾರ್ಯಕ್ರಮ :<br>ದಿನಾಂಕ 17.01.2015ರಂದು ರಾಜ್ಯದಾದ್ಯಂತ 34 ಜಿಲ್ಲೆಗಳಲ್ಲಿ ಜಿಲ್ಲಾಮಟ್ಟದ ಯುವವಿಜ್ಞಾನಿ ಆಯ್ಕೆ ಮತ್ತು ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಜಿಲ್ಲಾಮಟ್ಟದಲ್ಲಿ ಅತ್ಯುನ್ನತ ಅಂಕಗಳನ್ನು ಪಡೆದ ವಿದ್ಯಾರ್ಥಿಗೆ ರೂ.3,000/– ಗಳ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.<br>ರಾಜ್ಯಮಟ್ಟದ ಕಾರ್ಯಕ್ರಮ :<br>ರಾಜ್ಯದಾದ್ಯಂತ ಜಿಲ್ಲಾಮಟ್ಟದ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಿಗಾಗಿ ರಾಜ್ಯಮಟ್ಟದ ಕಾರ್ಯಕ್ರಮವನ್ನು ದಿನಾಂಕ 3–4, ಫೆಬ್ರವರಿ 2015ರಂದು ವಿಜಯಪುರ ನಗರದ ಕೆ.ಸಿ.ಪಿ. ಕಲಾ | ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಸೇರಿ 3500 ಪ್ರೌಢಶಾಲಾ ಹಾಗು ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಭಾಗವಹಿಸಿದ್ದರು.<br>ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ಬೆಂಗಳೂರಿನ ವಿಜಯಾ ಪ್ರೌಢಶಾಲೆಯ ವಿದ್ಯಾರ್ಥಿಯಾದ ತೇಜಸ್ ಇವರಿಗೆ ರೂ.10,000/–ಗಳ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ; ದ್ವಿತೀಯ ಸ್ಥಾನ ಪಡೆದ ಬಾಗಲಕೋಟೆಯ ಪ್ರಜ್ವಲ್ ರುದ್ರಾಕ್ಷಿ ಇವರಿಗೆ ರೂ.7,500/– ಗಳ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ, ಅದರಂತೆ ಉತ್ತೇಜನಾರ್ಥವಾಗಿ ಶಿವಮೊಗ್ಗದ ಅಭಯ್ |

| | | | | |
|---|---|---|---|---|
| | | | ಮತ್ತು ವಿಜ್ಞಾನ ಕಾಲೇಜಿನ ಆವರಣದಲ್ಲಿ ರಾಜ್ಯಮಟ್ಟದ ಯುವವಿಜ್ಞಾನಿ ಆಯ್ಕೆ ಹಾಗು ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. | ಹೆಗಡೆ ಹಾಗೂ ಶಿರಸಿ ನಗರದ ಶ್ರೀನಿಧಿ ಹೆಗಡೆ ಇವರಿಗೆ ರೂ. 5,000/–ಗಳ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು. |
| 10. | **ರಾಷ್ಟ್ರಮಟ್ಟದ ಚಿತ್ರಕಲಾ ಹಾಗೂ ಪ್ರಬಂದ ಸ್ಪರ್ಧೆ.** | ಇಂಧನ ಹಾಗೂ ಅನಿಲಗಳ ಸುಸ್ಥಿರ ಬಳಕೆಯ ಕುರಿತು 6–9ನೇ ತರಗತಿಯ ವಿದ್ಯಾರ್ಥಿಗಳಿಗೆ ಚಿತ್ರಕಲೆ ಹಾಗೂ ಪ್ರಬಂಧ ಸ್ಪರ್ಧೆ ಏರ್ಪಡಿಸುವ ಮೂಲಕ ಮಕ್ಕಳಲ್ಲಿ ಪರಿಸರದ ಬಗ್ಗೆ ಕಾಳಜಿ ಮೂಡಿಸುವ ಒಂದು ಪ್ರಯತ್ನ. | ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು Petrol Conservation Research Association (PCRA) ಹಾಗೂ ಪರಿಸರ ಶಿಕ್ಷಣ ಕೇಂದ್ರ, ದಕ್ಷಿಣ ವಿಭಾಗ, ಬೆಂಗಳೂರು ಇವುಗಳ ಸಂಯುಕ್ತಾಶ್ರಯದಲ್ಲಿ ದಿನಾಂಕ 17.12.2014ರಂದು ಕರಾವಿಪ ವಿಜ್ಞಾನಭವನದಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. | ಒಟ್ಟು 106 ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಅದರಲ್ಲಿ ಒಬ್ಬ ವಿದ್ಯಾರ್ಥಿನಿಯ ಪ್ರಬಂಧ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿ ರೂ.20,000/–, ಪ್ರಮಾಣಪತ್ರ ಹಾಗೂ ಬೆಳ್ಳಿ ಪದಕವನ್ನು ಪಡೆದಿರುತ್ತಾರೆ. |
| 11. | **ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಹಾಗೂ ವಿಶ್ವ ಜಲ ದಿನಾಚರಣೆ 2015**. | ಭೌತಶಾಸ್ತ್ರ ಕ್ಷೇತ್ರದಲ್ಲಿನ ಪ್ರಮುಖ ವಿಜ್ಞಾನಿಯಲ್ಲೊಬ್ಬರಾದ ಸರ್.ಸಿ.ವಿ.ರಾಮನ್‌ರವರು ತಮ್ಮ ಸಂಶೋಧನೆಯನ್ನು ಜಗತ್ತಿಗೆ ಪ್ರಸ್ತುತ ಪಡಿಸಿದ ದಿನವಾಗಿ ಫೆಬ್ರವರಿ 28ನ್ನು ಪ್ರತಿ ವರ್ಷ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನಾಗಿಯೂ ಹಾಗೂ ಮಾರ್ಚ್ 22ನ್ನು ಪ್ರತಿವರ್ಷ ಜಲ ವರ್ಷಾಚರಣೆಯನ್ನಾಗಿ ಆಚರಿಸಲಾಗುತ್ತದೆ.<br>ಈ ಬಾರಿ 2015ನೇ ವರ್ಷದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಪ್ರಮುಖ ವಿಷಯವನ್ನು ರಾಷ್ಟ್ರೀಯ ವಿಜ್ಞಾನ ಮತ್ತು ಸಂವಹನ ಮಂಡಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಭಾರತ ಸರ್ಕಾರ ಇವರು "ರಾಷ್ಟ್ರ ನಿರ್ಮಾಣದಲ್ಲಿ ವಿಜ್ಞಾನದ ಪಾತ್ರ" ಎಂದು ಘೋಷಿಸಿದ್ದರು. ಮಾರ್ಚ್ 22ರಂದು ವಿಶ್ವ ಜಲ ದಿನಾಚರಣೆಯ ಪ್ರಮುಖ ವಿಷಯ ನೀರು ಹಾಗೂ ಸುಸ್ಥಿರ ಅಭಿವೃದ್ಧಿ. ಇದನ್ನು ವಿಶ್ವಸಂಸ್ಥೆಯವರು ಘೋಷಿಸಿರುತ್ತಾರೆ. | ರಾಜ್ಯದ ಎಲ್ಲ 34 ಜಿಲ್ಲೆಗಳಿಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ. | ಒಟ್ಟು 3000 ಜನರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. |
| 12. | **ಪರಿಸರ ಸಂರಕ್ಷಣಾ ಜಾಗೃತಿ ಕಾರ್ಯಾಗಾರ** | ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಆಯಾ ವಿಭಾಗಗಳಲ್ಲಿರುವ ಪ್ರಮುಖ ಪ್ರಾಕೃತಿಕ ತಾಣಗಳಲ್ಲಿ ಅಲ್ಲಿನ ಸ್ಥಳೀಯ ನಿವಾಸಿಗಳಿಗೆ ಪರಿಸರ ಸಂರಕ್ಷಣೆ ಕುರಿತಾಗಿ ತಿಳುವಳಿಕೆ ನೀಡುವುದು. | ಈ ಕಾರ್ಯಕ್ರಮವನ್ನು 4 ವಿಭಾಗಗಳಲ್ಲಿ (ಬೆಳಗಾವಿ, ಕಲ್ಬುರ್ಗಿ, ಮೈಸೂರು ಹಾಗೂ ಬೆಂಗಳೂರುಗಳಲ್ಲಿ) ಆಯೋಜಿಸಲಾಗುತ್ತಿದೆ. | 500 ಜನರು |

| | | | | |
|---|---|---|---|---|
| 13. | **15ನೇ ಅಖಿಲ ಭಾರತ ಜನವಿಜ್ಞಾನ ಸಮ್ಮೇಳನ** | ಜನರಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಹೆಚ್ಚಿಸಲು ಹಾಗೂ ವಿಜ್ಞಾನವನ್ನು ಜನಪ್ರಿಯಗೊಳಿಸುತ್ತಿರುವ ಜನವಿಜ್ಞಾನ ಚಳುವಳಿಗಳ ಜಾಲದ 15ನೇ ಸಮ್ಮೇಳನ. | ಸಮ್ಮೇಳನದ ಪೂರ್ವಭಾವಿಯಾಗಿ ದಿನಾಂಕ 05.05.2015ರಂದು ಕರಾವಿಪ ವಿಜ್ಞಾನಭವನದ ಪ್ರೊ॥ ಎಂ.ಎ. ಸೇತುರಾವ್ ಸಭಾಂಗಣದಲ್ಲಿ "ಪಶ್ಚಿಮ ಘಟ್ಟಗಳ ಸಂರಕ್ಷಣೆ" ಕುರಿತು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.<br>"ವೈಜ್ಞಾನಿಕ ಮನೋವೃತ್ತಿ ಬೆಳೆಸಿಕೊಳ್ಳುವ ಬಗೆ" ಎಂಬ ವಿಷಯದಡಿ ದಕ್ಷಿಣ ಕರ್ನಾಟಕ ಹಾಗೂ ಉತ್ತರ ಕರ್ನಾಟಕ ಜಿಲ್ಲೆಗಳ ಪ್ರತಿನಿಧಿಗಳಿಗಾಗಿ ಕ್ರಮವಾಗಿ ದಿನಾಂಕ 14–15, ಮೇ 2015ರಂದು ಕರಾವಿಪ ವಿಜ್ಞಾನಭವನದ ಪ್ರೊ॥ ಎಂ.ಎ. ಸೇತುರಾವ್ ಸಭಾಂಗಣದಲ್ಲಿ ಹಾಗೂ ದಿನಾಂಕ 17–18, ಮೇ 2015ರಂದು ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಗದಗ ಇಲ್ಲಿ ಹಮ್ಮಿಕೊಳ್ಳಲಾಗಿತ್ತು.<br>ರಾಜ್ಯದ ಎಲ್ಲಾ 34 ಜಿಲ್ಲೆಗಳಲ್ಲಿ ವೈಜ್ಞಾನಿಕ ಮನೋಭಾವ, ಪರಿಸರ ಸಂರಕ್ಷಣೆ, ಶಿಕ್ಷಣ, ಮಕ್ಕಳ ಮತ್ತು ಮಹಿಳಾ ಹಕ್ಕುಗಳು, ಮಹಿಳೆ ಮತ್ತು ವಿಜ್ಞಾನ, ಮೂಢನಂಬಿಕೆ ಪ್ರತಿಬಂಧಕ ಕಾಯ್ದೆ ಕುರಿತಾದ ಪೋಸ್ಟರ್‌ಗಳ ಪ್ರದರ್ಶನದ ಮೂಲಕ ಜಾಗೃತಿ ಮೂಡಿಸಲಾಯಿತು.<br>"ಸಮಾಜ ಬದಲಾವಣೆಗಾಗಿ ವಿಜ್ಞಾನ" ಎಂಬ ಕೇಂದ್ರ ವಿಷಯದ ಮೇಲೆ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಹಾಗೂ ಭಾರತ ಜ್ಞಾನ ವಿಜ್ಞಾನ ಸಮಿತಿ, ಕರ್ನಾಟಕ ಇವುಗಳ ಸಂಯುಕ್ತಾಶ್ರಯದಲ್ಲಿ ಸಂಘಟಿಸಲಾಯಿತು. 4 ದಿನಗಳ ಕಾಲ ದಿನಾಂಕ 22–25, ಮೇ 2015ರ ವರೆಗೆ ಜ್ಞಾನ ಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಮ್ಮೇಳನದಲ್ಲಿ ವಿಜ್ಞಾನ, ಮಿಥ್ಯೆ ಮತ್ತು ವೈಜ್ಞಾನಿಕ ಮನೋಭಾವ, ಸ್ವಾವಲಂಬನೆ, ಅಭಿವೃದ್ಧಿಯ ನೀತಿಗಳು ಮತ್ತು ಬದಲೀ ಮಾರ್ಗಗಳು, ಪರಿಸರ, ಶಿಕ್ಷಣ, ಜನಾರೋಗ್ಯ, ಮೂಢನಂಬಿಕೆ ನಿವಾರಣೆ, ವಿಜ್ಞಾನ ಸಂವಹನ ಇತ್ಯಾದಿ ವಿಷಯಗಳ ಬಗ್ಗೆ 12 ಸಮಾನಂತರ ಗೋಷ್ಠಿಗಳು ನಡೆದವು. | ಪೂರ್ವಭಾವಿ ಕಾರ್ಯಾಗಾರದಲ್ಲಿ ಸುಮಾರು 500 ಜನರು ಭಾಗವಹಿಸಿರುತ್ತಾರೆ ಹಾಗೂ ಪೋಸ್ಟರ್ ಪ್ರದರ್ಶನದ ವೇಳೆಯಲ್ಲಿ ಸುಮಾರು 5000 ಜನರು ಇದರ ಪ್ರಯೋಜನ ಪಡೆದಿರುತ್ತಾರೆ.<br>ಸಮ್ಮೇಳನದಲ್ಲಿ ರಾಷ್ಟ್ರದ 38 ಜನಪರ ವಿಜ್ಞಾನ ಸಂಘಸಂಸ್ಥೆಗಳ 800 ಪ್ರತಿನಿಧಿಗಳು (ವಿಜ್ಞಾನಿಗಳು, ತಂತ್ರಜ್ಞರು, ಕೃಷಿ ತಜ್ಞರು, ಶಿಕ್ಷಕರು, ಅಧ್ಯಾಪಕರು, ವೈದ್ಯರು, ಇಂಜಿನಿಯರ್‌ಗಳು, ಕಲಾವಿದರು, ವಿಜ್ಞಾನ ಕಾರ್ಯಕರ್ತರು ಹಾಗೂ ವಿದ್ಯಾರ್ಥಿಗಳು) ಭಾಗವಹಿಸಿದ್ದರು. |

| | | | | |
|---|---|---|---|---|
| 14. | **ರಾಜ್ಯ ಮಟ್ಟದ ಅಂತರ ಕಾಲೇಜು ಕನ್ನಡ ವಿಜ್ಞಾನ ಉಪನ್ಯಾಸ ಸ್ಪರ್ಧೆ 2014–15** | ಕಾಲೇಜು ವಿದ್ಯಾರ್ಥಿಗಳು ವಿಜ್ಞಾನ ವಿಭಾಗದ ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ವಿಷಯ ಸಂಗ್ರಹಣೆ ಕೈಗೊಂಡು ಕನ್ನಡ ಮಾಧ್ಯಮದಲ್ಲಿ ಸಮರ್ಪಕವಾಗಿ ಉಪನ್ಯಾಸ ರೂಪದಲ್ಲಿ ಮಂಡಿಸಲು ಅವಕಾಶ ನೀಡುವುದು. | 2014 ಅಕ್ಟೋಬರ್ ನಿಂದ ಜನವರಿ ವರೆಗೂ ರಾಜ್ಯದಾದ್ಯಂತ ವಿವಿಧ ಜಿಲ್ಲೆಗಳಲ್ಲಿ ಆಯೋಜಿಸಲಾದ ಜಿಲ್ಲಾ ಹಂತ ಉಪನ್ಯಾಶ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಜಿಲ್ಲಾಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಅತ್ಯುತ್ತಮವಾಗಿ ವಿಷಯ ಮಂಡನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರಥಮ ಪುರಸ್ಕಾರವಾಗಿ, ರೂ. 1,000/– ದ್ವಿತೀಯ ಪುರಸ್ಕಾರವಾಗಿ ರೂ.500/– ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ನೀಡಿ ಪುರಸ್ಕರಿಸಲಾಗಿತ್ತು.<br>ದಿನಾಂಕ 14–15, ಫೆಬ್ರವರಿ 2015ರಂದು ಮಂಗಳೂರಿನ ಸೆಂಟ್ ಆಗ್ನೇಸ್ ಕಾಲೇಜು ಆವರಣದಲ್ಲಿ ಆಯೋಜನೆಗೊಂಡ ರಾಜ್ಯಮಟ್ಟದ ಉಪನ್ಯಾಸ ಸ್ಪರ್ಧೆಯಲ್ಲಿ ಒಟ್ಟು 34 ಜಿಲ್ಲೆಗಳಿಂದ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳು ಮತ್ತು ಮಾರ್ಗದರ್ಶಿ ಶಿಕ್ಷಕರು, ಪಿಲಿಕುಳ ನಿಸರ್ಗಧಾಮ ಹಾಗೂ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿದರು. | ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ಶಿವಮೊಗ್ಗದ ಡಿ.ವಿ.ಎಸ್. ಕಾಲೇಜಿನ ಜಿ.ಆರ್. ಅಕ್ಷತಾ ಇವರಿಗೆ ರೂ.3,000/–ಗಳನ್ನು ನಗದು ಬಹುಮಾನ ; ಎರಡನೆಯ ಸ್ಥಾನ ಪಡೆದ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ನಗರದ ಅಂಜುಮನ್ ಕಾಲೇಜಿನ ಹರೀಶ್ ಎಂ. ಪೈ ಇವರಿಗೆ ರೂ.2,000/– ನಗದು ಬಹುಮಾನ, ಕೋಲಾರ ನಗರದ ಸರ್ಕಾರಿ ಮಹಿಳಾ ಕಾಲೇಜಿನ ಎಸ್. ಸಹನಾ ಇವರಿಗೆ ರೂ.1,000/– ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಿ ಗೌರವಿಸಲಾಯಿತು. |
| 15. | **ಮಿಡ್ ಬ್ರೇನ್ ಆಕ್ಟಿವೇಶನ್ ವಂಚನೆ – ಜಾಗೃತಿ ಕಾರ್ಯಾಗಾರ** | ಮಕ್ಕಳ (ಐಕ್ಯೂ) ಬೌದ್ಧಿಕ ಮಟ್ಟವನ್ನು ಹೆಚ್ಚಿಸುವ ಹೆಸರಿನಲ್ಲಿ ಪೋಷಕರನ್ನು ಹಾಗೂ ಸಾರ್ವಜನಿಕರನ್ನು ಹಲವಾರು ಸಂಸ್ಥೆಗಳು ವಂಚನೆ ಮಾಡುತ್ತಿರುವ ಕುರಿತು ಜಾಗೃತಿ ಮೂಡಿಸುವುದು. | ಮಕ್ಕಳ (ಐಕ್ಯೂ) ಬೌದ್ಧಿಕ ಮಟ್ಟವನ್ನು ಹೆಚ್ಚಿಸುವ ಹೆಸರಿನಲ್ಲಿ ಪೋಷಕರನ್ನು ಹಾಗೂ ಸಾರ್ವಜನಿಕರನ್ನು ಹಲವಾರು ಸಂಸ್ಥೆಗಳು ವಂಚನೆ ಮಾಡುತ್ತಿರುವ ಹಿನ್ನೆಲೆಯಲ್ಲಿ ವಿಜ್ಞಾನಭವನದ ಸೇತುರಾವ್ ಸಭಾಂಗಣದಲ್ಲಿ ದಿನಾಂಕ 12.05.2015ರಂದು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮಂಗಳೂರಿನ ವಿಚಾರವಾದಿ ಡಾ. ನರೇಂದ್ರ ನಾಯಕ್, ಮನೋವೈದ್ಯ ಡಾ॥ ಸಿ.ಆರ್. ಚಂದ್ರಶೇಖರ್, ಮನಶಾಸ್ತ್ರಜ್ಞರಾದ ಡಾ॥ ಕೇಶವ್ ಕುಮಾರ್ ಹಾಗೂ ಶ್ರೀ ನಕುಲ್ ಶೆಣೈ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಮಾರ್ಗದರ್ಶನ ನೀಡಿದರು. | ಕಾರ್ಯಕ್ರಮದಲ್ಲಿ ಒಟ್ಟು 70 ಜನ ವಿದ್ಯಾರ್ಥಿಗಳು, ಪಾಲಕರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. |

| | | | | |
|---|---|---|---|---|
| 16. | **ರಾಜ್ಯಮಟ್ಟದ ಮಹಿಳಾ ವಿಜ್ಞಾನ ಸಮಾವೇಶ** | ಮಹಿಳೆಯರಲ್ಲಿ ವೈಜ್ಞಾನಿಕ ಮನೋಭಾವನೆ, ಸ್ವಾವಲಂಬನೆ ಹಾಗೂ ಸಶಕ್ತೀಕರಣ ಕುರಿತು ಜಾಗೃತಿ ಮೂಡಿಸುವುದು. | ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಆವರಣದ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸಹಯೋಗದಲ್ಲಿ ದಿನಾಂಕ 7–9, ಏಪ್ರಿಲ್ 2015 ಗಳಂದು ರಾಜ್ಯಮಟ್ಟದ ಮಹಿಳಾ ವಿಜ್ಞಾನ ಸಮಾವೇಶವನ್ನು ಆಯೋಜಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಾಗಿ ಬೆಂಗಳೂರಿನ ಆಕಾಶವಾಣಿ ಕೇಂದ್ರದ ಶ್ರೀಮತಿ ಸುಮಂಗಲಾ ಎಸ್. ಮುಮ್ಮಿಗಟ್ಟಿ, ಜನವಾದಿ ಸಂಘಟನೆಯ ಶ್ರೀಮತಿ ಕೆ.ಎಸ್. ವಿಮಲಾ, ರಾಷ್ಟ್ರೀಯ ವೈಮಾನಾಂತರಿಕ್ಷ ಪ್ರಯೋಗಾಲಯದ ಶ್ರೀಮತಿ ಜಿ.ವಿ. ನಿರ್ಮಲ, ಉಪನ್ಯಾಸಕಿಯರಾದ ಡಾ. ವೈ.ಸಿ. ಕಮಲಾ, ಡಾ. ವಿನಯಾ ಒಕ್ಕುಂದ, ಡಾ. ವಿಜಯಲಕ್ಷ್ಮಿ ಇವರುಗಳು ಮಾರ್ಗದರ್ಶನ ನೀಡಿದರು. | ಕಾರ್ಯಕ್ರಮದಲ್ಲಿ ಒಟ್ಟು 67 ಜನ ಮಹಿಳೆಯರು ಭಾಗವಹಿಸಿದ್ದರು. |